ಆರ್‌ಬಿಐ/2005–06/399

ಆರ್‌ಪಿಸಿಡಿ.ಸಿಒ.ಆರ್‌ಎಫ್.ಬಿಸಿ.ಸಂಖ್ಯೆ 87/07.38.01/2005–06

ಜೂನ್ 6, 2006

ಎಲ್ಲ ರಾಜ್ಯ ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು

ಮಾನ್ಯರೇ,

**ಕೆಲವು ಸಂಸ್ಥೆಗಳ/ ಸಂಘಟನೆಗಳ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಖಾತೆಗಳನ್ನು ತೆರೆಯುವುದು**

ಕೇಂದ್ರ ಸರ್ಕಾರವು ಪ್ರಾಯೋಜಿಸಿದ ವಿವಿಧ ಕಾರ್ಯಕ್ರಮಗಳನ್ನು/ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಬಿಡುಗಡೆ ಮಾಡಲಾದ ಅನುದಾನಗಳಿಗೆ/ಸಬ್ಸಿಡಿಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ/ಸಂಸ್ಥೆಗೆ ಉಳಿತಾಯ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮತಿಸಲಾಗಿದೆ ಎಂದು ಪ್ರಮಾಣೀಕರಿಸಿ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಅಧಿಕಾರ ಪತ್ರವನ್ನು ಬ್ಯಾಂಕಿಗೆ ಹಾಜರುಪಡಿಸಿದ ತರುವಾಯ ಸರ್ಕಾರಿ ಇಲಾಖೆಗಳ/ ಸಂಸ್ಥೆಗಳ/ಏಜೆನ್ಸಿಗಳ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಖಾತೆಗಳನ್ನು ತೆರೆಯಲು ಬ್ಯಾಂಕುಗಳಿಗೆ ಅನುಮತಿ ನೀಡಿ ಹೊರಡಿಸಿರುವ 2000ದ ಅಕ್ಟೋಬರ್ 17ನೇ ದಿನಾಂಕದ ಸುತ್ತೋಲೆ ಆರ್‌ಪಿಸಿಡಿ ಸಂಖ್ಯೆ. ಆರ್‌ಎಫ್.ಡಿಐಆರ್.ಬಿಸಿ. 30/07.38.01/2000–01 ನ್ನು ದಯವಿಟ್ಟು ನೋಡಿ.

2. ಸದರಿ ವಿಷಯವನ್ನು ಪರಿಶೀಲಿಸಿದ ತರುವಾಯ, ಕೇಂದ್ರ ಸರ್ಕಾರವು ಪ್ರಾಯೋಜಿಸಿದ ವಿವಿಧ ಕಾರ್ಯಕ್ರಮಗಳನ್ನು / ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಬಿಡುಗಡೆ ಮಾಡಲಾದ ಅನುದಾನಗಳು/ ಸಬ್ಸಿಡಿಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ/ ಅಥವಾ ಸಂಸ್ಥೆಗೆ ಉಳಿತಾಯ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮತಿಸಲಾಗಿದೆ ಎಂದು ಪ್ರಮಾಣೀಕರಿಸಿ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಅಧಿಕಾರ ಪತ್ರವನ್ನು ಬ್ಯಾಂಕಿಗೆ ಹಾಜರುಪಡಿಸಿದ ತರುವಾಯ ಸರ್ಕಾರಿ ಇಲಾಖೆಗಳ/ಸಂಸ್ಥೆಗಳ/ಏಜೆನ್ಸಿಗಳ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಖಾತೆಗಳನ್ನು ತೆರೆಯಲು ಬ್ಯಾಂಕುಗಳಿಗೆ ಅವಕಾಶ ನೀಡಲು ಈಗ ನಿರ್ಧರಿಸಲಾಗಿದೆ. ಬ್ಯಾಂಕುಗಳು ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆಗಳು ನೀಡಿದ ಅಧಿಕಾರ ಪತ್ರದ ಒಂದು ಪ್ರತಿಯನ್ನು ತಮ್ಮ ದಾಖಲೆ ಕಡತದಲ್ಲಿ ಇಟ್ಟುಕೊಳ್ಳತಕ್ಕದ್ದು. ಅದರಂತೆ, ಉಲ್ಲೇಖದಲ್ಲಿ ನಮೂದಿಸಿರುವ ನಮ್ಮ ಸುತ್ತೋಲೆಯೊಂದಿಗೆ ಲಗತ್ತಿಸಿರುವ, ದಿನಾಂಕ 17 ನೇ ಅಕ್ಟೋಬರ್ 2000ದ ನಮ್ಮ ಮಾರ್ಗದರ್ಶಕ ಸೂಚನೆ ಆರ್‌ಪಿಸಿಡಿ. ಸಂಖ್ಯೆ. ಡಿಐಆರ್.ಬಿಸಿ. 29/07.38.01/2000–01 ಇದರ 5 (**ii**) (ಜಿ) ಖಂಡವನ್ನು ತಿದ್ದುಪಡಿ ಮಾಡಲಾಗಿದೆ.

3. ತಿದ್ದುಪಡಿ ಮಾಡುವ ಮಾರ್ಗದರ್ಶಕ ಸೂಚನೆ ಆರ್‌ಪಿಸಿಡಿ.ಆರ್‌ಎಫ್.ಡಿಐಆರ್.5516/07.38.01/2005–06 ದಿನಾಂಕ ಜೂನ್ 6, 2006 ಇದನ್ನು ಲಗತ್ತಿಸಲಾಗಿದೆ.

4. ತಲುಪಿದ ಬಗ್ಗೆ ಸಂಬಂಧಪಟ್ಟ ನಮ್ಮ ಪ್ರಾದೇಶಿಕ ಕಚೇರಿಗಳು ದಯವಿಟ್ಟು ಸ್ವೀಕೃತಿ ನೀಡುವುದು.

ತಮ್ಮ ವಿಶ್ವಾಸಿ,
(ಜಿ. ಶ್ರೀನಿವಾಸನ್)
ಮುಖ್ಯ ಪ್ರಧಾನ ವ್ಯವಸ್ಥಾಪಕ.

ಆರ್‌ಪಿಸಿಡಿ.ಆರ್‌ಎಫ್.ಡಿಐಆರ್.5516/07.38.01/2005-06 ಜುಲೈ 6, 2006

**ಕೆಲವು ಸಂಸ್ಥೆಗಳ/ ಸಂಘಟನೆಗಳ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಖಾತೆಗಳನ್ನು ತೆರೆಯುವುದು**

ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ (ಸಹಕಾರ ಸಂಘಗಳಿಗೆ ಅನ್ವಯವಾಗುವಂತೆ) 21 ಮತ್ತು 35ಎ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ತನ್ನ ಮಾರ್ಗದರ್ಶಕ ಸೂಚನೆ ಆರ್‌ಪಿಸಿಡಿ. ಸಂ. ಆರ್‌ಎಫ್.ಡಿಐಆರ್.ಬಿಸಿ. 29/07.38.01/2000-01 ದಿನಾಂಕ ಅಕ್ಟೋಬರ್ 17, 2000 ಇದನ್ನು ಮಾರ್ಪಡಿಸಿ, ಭಾರತೀಯ ರಿಸರ್ವ್ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ, ಮೇಲ್ಕಂಡಯ 5ನೇ ಪ್ಯಾರಾದ (ii) (ಜಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪ್ರತಿಸ್ಥಾಪಿಸುವುದು ಅವಶ್ಯ ಮತ್ತು ಯುಕ್ತವೆಂದು ಮನಗಂಡು, ಅದು ಹಾಗೆ ಮಾಡುವಂತೆ ಈ ಮೂಲಕ ನಿರ್ದೇಶಿಸುತ್ತದೆ.

> **ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರಗಳು** ಪ್ರಾಯೋಜಿಸಿದ ವಿವಿಧ ಕಾರ್ಯಕ್ರಮಗಳ/ ಕಾರ್ಯ ಯೋಜನೆಗಳ ಅನುಷ್ಠಾನಗಕ್ಕಾಗಿ ಬಿಡುಗಡೆ ಮಾಡಿದ ಅನುದಾನಗಳಿಗೆ/ ಸಬ್ಸಿಡಿಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಕೇಂದ್ರ / ರಾಜ್ಯ ಸರ್ಕಾರದ ಇಲಾಖೆಗಳಿಂದ ಪಡೆದ ಅಧಿಕಾರ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು ಸರ್ಕಾರದ ಇಲಾಖೆಗಳ/ ಸಂಸ್ಥೆಗಳ/ಏಜೆನ್ಸಿಗಳ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಖಾತೆಯನ್ನು ತೆರೆಯಲು ಅವಕಾಶ ನೀಡಲಾಗಿದೆ.

ಆರ್‌ಪಿಸಿಡಿ. ಸಂಖ್ಯೆ. ಆರ್‌ಎಫ್. ಡಿಐಆರ್. ಬಿಸಿ. 53/ಡಿ.1-87-88 ದಿನಾಂಕ ನವೆಂಬರ್ 2, 1987ರ ಮಾರ್ಗದರ್ಶಕ ಸೂಚನೆಯ ಎಲ್ಲ ಇತರ ಉಪಬಂಧಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ.

**(ವಿ.ಎಸ್. ದಾಸ್)**
ಕಾರ್ಯನಿರ್ವಾಹಕ ನಿರ್ದೇಶಕ.